**<u>ಪ್ರಧಾನ  ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ</u>**

**<u>ನ್ಯಾಯಾಲಯ, ಕೊಳ್ಳೇಗಾಲ.</u>**

**<u>ಉಪಸ್ಥಿತರು</u>**

**ಶ್ರೀಮತಿ.ನಂದಿನಿ.ಎಂ.ಎನ್. ಬಿ . ಎ ., ಎಲ್ .ಎಲ್ ಬಿ .,**

**ಪ್ರಧಾನ ಸಿವಿಲ್ ನ್ಯಾಯಾಧೀಶರು  ಹಾಗೂ ಪ್ರ. ದ. ನ್ಯಾ.ದಂ.**

**<u>ಅಸಲು ದಾವಾ ಸಂಖ್ಯೆ. 44/2022</u>**

**<u>ದಿನಾಂಕಃ 21 ನೇ ಏಪ್ರಿಲ್   2023</u>**

**ವಾದಿಃ** ಶ್ರೀ ಫ್ರಾನ್ಸಿಸ್  ಸವರಿಯಪ್ಪನ್ ಬಿನ್ ಲೇಟ್ ಅಂತೋಣಿಸ್ವಾಮಿ,
ಸುಮಾರು 36 ವರ್ಷಗಳು,
ವಾಸಃ ಜಕ್ಕಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

**(ವಾದಿ  ಪರ ಶ್ರೀ ಬಿ.ರಾಜು, ವಕೀಲರು)**

**ವಿರುದ್ಧ**

**ಪ್ರತಿವಾದಿಗಳುಃ** 1. ಶ್ರೀ ಜಾನ್ ಪೀಟರ್  ಬಿನ್  ಲೇಟ್ ಕೊಳಂದೈಸ್ವಾಮಿ,
ಸುಮಾರು 58 ವರ್ಷಗಳು,
ವಾಸಃ ಜಕ್ಕಹಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

2. ಶ್ರೀಮತಿ ಪ್ಲೋರಾಮೇರಿ ಕೋಂ ಲೇಟ್ ಲಾಜರ್,
ಸುಮಾರು 56 ವರ್ಷಗಳು,
ವಾಸಃ ಮನೆ ನಂ. 3852/4,
ಎಸ್.ಎಂ.ಕೆ.ಎಫ್. ಮಾನ್ ಸನ್, 14 ನೇ ಮಹಡಿ,
ಸೇಂಟ್ ಮೇರಿ ರಸ್ತೆ, ಗಾಂಧಿನಗರ,ಮೈಸೂರು.

**3.** ಶ್ರೀ ಮಾರ್ಟಿನ್ ಜಾನ್ ಪಾಲ್ ಬಿನ್ ಲೇಟ್ ಲಾಜರ್,
ಸುಮಾರು 38 ವರ್ಷಗಳು,
ಹಿರಿಯ ಪ್ರಾಥಮಿಕ ಪ್ರೌಢಶಾಲೆ,
ಶಾಂತಿನಗರ, ಮೈಸೂರು-570019.

**( ಪ್ರತಿವಾದಿಗಳ ಪರ ಶ್ರೀ ರುದ್ರಾರಾಧ್ಯ, ವಕೀಲರು )**

**ಮಧ್ಯಂತರ ಅರ್ಜಿ ಸಂಖ್ಯೆ: 1 ಸಿ. ಪ್ರ. ಸಂ. ಕ್ರಮಾದೇಶ XXXIX ನಿಯಮ 1 ಮತ್ತು 2 ರ ಮೇಲಿನ ಆದೇಶ**

ಅರ್ಜಿದಾರ/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ-1ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅದರಲ್ಲಿ ಪ್ರತಿವಾದಿಗಳು ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ತೊಂದರೆಯನ್ನುಂಟು ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2. ವಾದಿಯ ಮಧ್ಯಂತರ ಅರ್ಜಿ ಸಂಖ್ಯೆ-1 ರ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ:-**

ಮಧ್ಯಂತರ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ತಿಮ್ಮರಾಜಿಪುರ ಗ್ರಾಮ ಪಂಚಾಯಿತಿಯ ಜಕ್ಕಹಳ್ಳಿ ಗ್ರಾಮದ ಹಳೆ ಜಂಜರ್ 84 ಪ್ರಸ್ತುತ ಜಂಜರ್ 83, ಸ್ವತ್ತಿನ ಸಂಖ್ಯೆ 73 ಪೂರ್ವ ಪಶ್ಚಿಮ 30 ಅಡಿಗಳು, ಉತ್ತರ-ದಕ್ಷಿಣ 50 ಅಡಿಗಳುಳ್ಳ ದಾವಾ ಸ್ವತ್ತು ಮೂಲತಃ ತೋಮರ್ ಪಾಳ್ಯದ ಲೇಟ್ ಅರುಳಸ್ವಾಮಿ ರವರ ಮಗ ಎ.ಲಾಜರ್ ಮತ್ತು ಅವರ ಪತ್ನಿ ಪ್ಲೋರಾ ರವರಿಗೆ ಸೇರಿದ ಸ್ವಯಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ವಾದಿಯಾದ ತಾನು ದಿನಾಂಕಃ 05.05.2010 ರಂದು ಕ್ರಯಕ್ಕೆ ಪಡೆದಿದ್ದು, ಅದರಂತೆ

ಖಾತೆಯಾಗಿದ್ದು, ಕಂದಾಯವನ್ನು ಪಾವತಿಸುತ್ತಾ ಬಂದಿದ್ದು, ದಾವಾ ಸ್ವತ್ತು ಮಂಗಳೂರು ಹೆಂಚಿನ ಮನೆ ಮತ್ತು ಖಾಲಿ ನಿವೇಶನವಾಗಿದ್ದು, ಅದರಲ್ಲಿ ಸ್ವಾಧೀನಾನುಭವ ಹೊಂದಿರುವುದಾಗಿ, ಹೀಗಿರುವಲ್ಲಿ ದಾವಾ ಸ್ವತ್ತಿನ ಮನೆ ಮುಂಭಾಗದ ಪಾರ್ಶ್ವ ಖಾಲಿ ಜಾಗದಲ್ಲಿ ಕೊಠಡಿ ನಿರ್ಮಿಸಲು ತಳಪಾಯ ಹಾಕಿ 4 ಅಡಿ ಗೋಡೆ ನಿರ್ಮಾಣ ಮಾಡುವ ಅವಧಿಯಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಬಾಧ್ಯತೆ ಇಲ್ಲದಿದ್ದಾಗ್ಯೂ ತೊಂದರೆಯನ್ನುಂಟು ಮಾಡಿರುತ್ತಾರೆ. ಈ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡಿದಾಗ್ಯೂ ಸದರಿಯವರು ಸಿವಿಲ್ ಸ್ವರೂಪದೆಂದು ತಿಳಿಸಿ ಕಳುಹಿಸಿರುತ್ತಾರೆ. ಈ ಕಾರಣದಿಂದ ದಾವೆ ದಾಖಲಿಸಿದ್ದು, ಈ ಹಂತದಲ್ಲಿ ಪ್ರತಿವಾದಿಗಳು ತೊಂದರೆಯನ್ನುಂಟು ಮಾಡುವುದನ್ನು ನಿರ್ಬಂಧಿಸುವ ಸಲುವಾಗಿ ತಾತ್ಕಾಲಿಕ ತಡೆಯಾಜ್ಞೆ ಆದೇಶ ಮಂಜೂರು ಮಾಡಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಮಾಣಪತ್ರದಲ್ಲಿ ಕೋರಿರುತ್ತಾರೆ.

**3.** ಅದರಂತೆ ವಾದಿಯು ಸಲ್ಲಿಸಿರುವ ಅರ್ಜಿಗೆ 1 ನೇ ಪ್ರತಿವಾದಿ ತಕರಾರು ಸಲ್ಲಿಸಿದ್ದು, ಸದರಿ ತಕರಾರನ್ನೇ ಪ್ರತಿವಾದಿ 2 ಮತ್ತು 3 ರವರು ಸಹ ತಕರಾರು ಎಂದು ಪರಿಗಣಿಸುವಂತೆ ಕೋರಿ ಮೆಮೋ ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಊರ್ಜಿತವಾದುದಲ್ಲ. ಬದಲಾಗಿ ವಜಾಕರಿಸಲು ಯೋಗ್ಯವಾಗಿರುತ್ತದೆ. ವಾದಿ ಯಾವುದೇ ಕಾಲಕ್ಕೂ ಸ್ವಾಧೀನದಲ್ಲಿರುವುದಿಲ್ಲ. ದಾವಾ ಸ್ವತ್ತು ವಾದಿಗೆ ಸೇರಿದ ಸ್ವತ್ತಾಗಿರುವುದಿಲ್ಲ. 1 ನೇ ಪ್ರತಿವಾದಿಗೆ ಜಂಜರ್ ನಂ.251 ಸ್ವತ್ತಿನ ಸಂಖ್ಯೆ 74 ಪೂರ್ವ–ಪಶ್ಚಿಮ 50 ಅಡಿಗಳು, ಉತ್ತರ–ದಕ್ಷಿಣ 80 ಅಡಿಗಳುಳ್ಳ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದು, ಅದರಲ್ಲಿ ಖಾತೆದಾರರಾಗಿ ಸ್ವಾಧೀನ

ಹೊಂದಿದ್ದು ಪ್ರಸ್ತುತ ಸ್ವತ್ತು ಖಾಲಿ ನಿವೇಶನವಾಗಿದ್ದು, ಅದರ ಸುತ್ತಲೂ ತಂತಿಬೇಲಿ ಮತ್ತು ಕಲ್ಲುಕಂಬ ಹಾಕಲು ಮುಂದಾಗಿರುವಾಗ್ಗೆ ವಾದಿಗೆ ಯಾವುದೇ ಹಕ್ಕುಬಾಧ್ಯತೆ ಇಲ್ಲದಿದ್ದಾಗ್ಯೂ ಕಾಮಗಾರಿ ಕೆಲಸಕ್ಕೆ ಅಡ್ಡಿಪಡಿಸಿರುತ್ತಾರೆ. ದಾವಾ ಸ್ವತ್ತು ಎ. ಲಾಜರ್ ಮತ್ತು ಪತ್ನಿ ಫ್ಲೋರಾ ರವರಿಗೆ ಸೇರಿದ ಸ್ವತ್ತಾಗಿದ್ದು ವಾದಿಯು ಇತ್ತೀಚೆಗೆ ಒಂದು ವಾರದ ಹಿಂದೆ ಬಂದು ಸ್ವಾಧೀನದಲ್ಲಿರುತ್ತಾರೆ. ವಾದಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕಿರುವುದಿಲ್ಲ. 1 ನೇ ಪ್ರತಿವಾದಿಗೆ ವಾದಿಯು ತೊಂದರೆಯನ್ನುಂಟು ಮಾಡಿದ ಕಾರಣ ಅಸಲು ದಾವಾ ಸಂಖ್ಯೆ 332/2021 ನ್ನು ದಾಖಲಿಸಿ ತಾತ್ಕಾಲಿಕ ತಡೆಯಾಜ್ಞೆ ಪಡೆದ ನಂತರದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಮತ್ತು ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಮಧ್ಯಂತರ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿರುತ್ತಾರೆ.

4. ಅದರಂತೆ ಅಂತಿಮವಾಗಿ ವಾದಿ ಮತ್ತು ಪ್ರತಿವಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು.

5. ಅರ್ಜಿದಾರರ ಅರ್ಜಿಯಲ್ಲಿನ ಅಂಶಗಳು ಮತ್ತು ದಾಖಲಾತಿಗಳನ್ನು ಹಾಗೂ ಪ್ರತಿವಾದಿಯರ ತಕರಾರು ಮತ್ತು ದಾಖಲಾತಿಗಳನ್ನು ಕೂಲಂಕೂಶವಾಗಿ ಪರಿಶೀಲಿಸಿ ಅದರಂತೆ ನ್ಯಾಯಾಲಯದ ವಿವೇಚನೆಗೆ ಈ ಕೆಳಕಂಡ ಅಂಶಗಳ ಪ್ರಶ್ನೆಗಳು ಉದ್ಭವವಾಗುತ್ತವೆ.

1. *ವಾದಿಯ ಅರ್ಜಿಯನ್ನು ಪುರಸ್ಕರಿಸಲು ಸಂಭವನೀಯತೆಯ ಒಲವು ವಾದಿಯ ಪರವಾಗಿರುತ್ತದೆಯೇ?*
2. *ಅರ್ಜಿ ಪುರಸ್ಕರಿಸಲು ಸಕಾರಣಗಳಿರುತ್ತವೆಯೇ ?*
3. *ಅರ್ಜಿ ಪುರಸ್ಕರಿಸದಿದ್ದಲ್ಲಿ ಹೆಚ್ಚಿನ ಹಾನಿ ಅಥವಾ ನಷ್ಟ ಉಂಟಾಗುತ್ತದೆಯೇ?*

*4. ಯಾವ ಆದೇಶ?*

6. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶ 1 – ನಕಾರಾತ್ಮಕವಾಗಿ

ಅಂಶ 2 – ನಕಾರಾತ್ಮಕವಾಗಿ

ಅಂಶ 3 – ನಕಾರಾತ್ಮಕವಾಗಿ

ಅಂಶ 4– ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಉತ್ತರಿಸಲಾಯಿತು.

## ಕಾರಣಗಳು

**7. ಅಂಶ 1 ರಿಂದ 3 –** ಪ್ರಸ್ತುತ ದಾವೆಯಲ್ಲಿ ವಾದಿಯು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಅದರಲ್ಲಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಮಧ್ಯಂತರ ಅರ್ಜಿ–1 ನ್ನು ಸಲ್ಲಿಸಿದ್ದು ಅದರಲ್ಲಿ ಅಂಶ–1 ರಿಂದ ಅಂಶ–3 ಒಂದಕ್ಕೊಂದು ಪೂರಕ ಅಂಶಗಳಾಗಿರುವುದರಿಂದ ಒಟ್ಟಾರೆಯಾಗಿ ಚರ್ಚಿಸಿ ಉತ್ತರಿಸಲಾಯಿತು.

**8.** ಅರ್ಜಿದಾರ/ವಾದಿಯು ದಾವಾ ಸ್ವತ್ತು ಹಳೆ ಜಂಜರ್ ನಂ. 84, ಪ್ರಸ್ತುತ ಜಂಜರ್ ನಂ. 83 ಸ್ವತ್ತಿನ ಸಂಖ್ಯೆ 73 ಪೂರ್ವ–ಪಶ್ಚಿಮ 30 ಅಡಿಗಳು, ಉತ್ತರ–ದಕ್ಷಿಣ 50 ಅಡಿಗಳುಳ್ಳ ಸ್ವತ್ತು ಮಂಗಳೂರು ಹೆಂಚಿನ ಮನೆ ಮತ್ತು ಖಾಲಿ ಜಾಗವಾಗಿದ್ದು, ಸದರಿ ಸ್ವತ್ತು ಮೂಲತಃ ಎ. ಲಾಜರ್ ಮತ್ತು ಅವರ ಪತ್ನಿ ಪ್ಲೋರಾ ರವರಿಗೆ ಸೇರಿದ ಸ್ವಯಾರ್ಜಿತ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ವಾದಿಯು ದಿನಾಂಕಃ 05.05.2010 ರಂದು ಕ್ರಯಕ್ಕೆ ಪಡೆದಿರುವುದಾಗಿ, ಅದರಂತೆ ಖಾತೆಯು

ವರ್ಗಾವಣೆಯಾಗಿ ಕಂದಾಯವನ್ನು ಪಾವತಿಸುತ್ತಾ ಸ್ವಾಧೀನಾನುಭವ ಹೊಂದಿರುತ್ತೇನೆಂದು ಹೀಗಿರುವಲ್ಲಿ ದಾವಾ ಸ್ವತ್ತಿನ ಮನೆ ಮುಂಭಾಗದ ಪಾರ್ಶ್ವ ಭಾಗದಲ್ಲಿ ಕೊಠಡಿ ನಿರ್ಮಿಸಲು ಅಡಿಪಾಯ ಹಾಕಲು ಮುಂದಾದಾಗ, 4 ಅಡಿ ಗೋಡೆ ನಿರ್ಮಾಣದ ಅವಧಿಯಲ್ಲಿ ಪ್ರತಿವಾದಿಗಳು ತೊಂದರೆ ಉಂಟು ಮಾಡುತ್ತಿರುತ್ತಾರೆ. ಗೋಡೆ ನಿರ್ಮಾಣಕ್ಕೆ ಸಾಮಗ್ರಿಗಳನ್ನು ಶೇಖರಣೆ ಮಾಡಲಾಗಿರುತ್ತದೆ. ಪ್ರತಿವಾದಿಗಳು ತೊಂದರೆಯನ್ನುಂಟು ಮಾಡಿದ ದೂರನ್ನು ಸಹ ನೀಡಿದ್ದು, ಅದಕ್ಕೆ ಸಿವಿಲ್ ಸ್ವರೂಪವೆಂದು ತಿಳಿಸಿ ಕಳುಹಿಸಿರುತ್ತಾರೆ. ಪ್ರತಿವಾದಿಗಳಿಂದ ದಾವಾ ಸ್ವತ್ತಿನ ರಕ್ಷಣೆಗಾಗಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶ ಅತ್ಯಾವಶ್ಯಕ ಎಂಬುದಾಗಿ ಕೋರಿ ಪ್ರಮಾಣಪತ್ರದಲ್ಲಿ ತಿಳಿಸಿದಲ್ಲದೇ ದಿನಾಂಕಃ 05.05.2010 ರಲ್ಲಿ ಆಗಿರುವ ಅನೊಂದಾಯಿತ ಕ್ರಯಪತ್ರದ ದಾಖಲೆಯನ್ನು, ಸ್ವತ್ತಿನ ಸಂಖ್ಯೆಃ 84/73, 2010-11 ನೇ ಸಾಲಿನ ತೆರಿಗೆ ಡಿಮ್ಯಾಂಡ್ ರಿಜಿಸ್ಟರ್, ಸ್ವತ್ತಿನ ಸಂಖ್ಯೆಃ 83/73 2021-22 ನೇ ಸಾಲಿನ ತೆರಿಗೆ ಡಿಮ್ಯಾಂಡ್ ರಿಜಿಸ್ಟರ್ ಹಾಗೂ 2010-11, 2014-15, 2020-2021 ನೇ ಸಾಲಿನಲ್ಲಿ ಪಾವತಿಸಿರುವ ಕಂದಾಯದ ರಶೀದಿಗಳು ಹಾಗೂ ಪೋಟೋ ಮತ್ತು ಸಿ.ಡಿಯನ್ನು ಹಾಜರು ಪಡಿಸಿರುತ್ತಾರೆ.

**9.** 1 ನೇ ಪ್ರತಿವಾದಿಯು ಸಲ್ಲಿಸಿರುವ ತಕರಾರನ್ನು ಕೂಲಂಕೂಷವಾಗಿ ಪರಿಶೀಲಿಸಿ ವಾದಿಯು ಪ್ರತಿವಾದಿ-1 ರವರ ಸ್ವತ್ತಾದ ಜಂಜರ್ ನಂಬರ್ 251 ಸ್ವತ್ತಿನ ಸಂಖ್ಯೆಃ 74 ಪೂರ್ವ-ಪಶ್ಚಿಮ 50 ಅಡಿಗಳು, ಉತ್ತರ-ದಕ್ಷಿಣ 80 ಅಡಿಗಳುಳ್ಳ ಸ್ವತ್ತು ಪಿತ್ರಾರ್ಜಿತ ಸ್ವತ್ತು ಆಗಿದ್ದು ಖಾತೆಯು 2010-11 ರಿಂದ 2021-22 ರವಗೊ ತನ್ನ ಹೆಸರಿನಲ್ಲಿಯೇ ಇದ್ದು ಸದರಿ ಸ್ವತ್ತು ಖಾಲಿ ನಿವೇಶನವಾಗಿದ್ದು ಅದರಲ್ಲಿ ತಂತಿಬೇಲಿ ಮತ್ತು ಕಲ್ಲುಕಂಬ ಹಾಕಲು ಮುಂದಾದಾಗ ವಾದಿ

ತೊಂದರೆಗೆ ನೀಡಿದ್ದರಿಂದಾಗಿ ಅಸಲು ದಾವಾ ಸಂಖ್ಯೆ 332/2021 ನ್ನು ದಾಖಲಿಸಿರುವುದಾಗಿ, ಅಲ್ಲದೆ ವಾದಿಯು ದಾವಾ ಸ್ವತ್ತಿನಲ್ಲಿ ಇತ್ತೀಚೆಗೆ ಒಂದು ವಾರದಿಂದ ಬಂದು ಸೇರಿಕೊಂಡಿರುತ್ತಾರೆ. ಇರಿಂದಾಗಿ ವಾದಿಗೆ ದಾವಾ ಸ್ವತ್ತಿನಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ದಾವಾ ಸ್ವತ್ತು ಎ.ಲಾಜರ್ ಪತ್ನಿ ಪ್ಲೋರಾರವರಿಗೆ ಸೇರಿದ್ದರಿಂದಾಗಿ ವಾದಿಯು ಸೃಷ್ಟಿತ ದಾಖಲೆಯನ್ವಯ ದಾವೆ ದಾಖಲಿಸಿರುತ್ತಾರೆ. ಆದ್ದರಿಂದ ದಾವೆಯನ್ನು ಮತ್ತು ಮಧ್ಯಂತರ ಅರ್ಜಿಯನ್ನು ವಜಾಕರಿಸಬೇಕೆಂದು ಕೋರಿರುತ್ತಾರೆ. ಪ್ರಸ್ತುತ ದಾವೆಯು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾಖಲಿಸಿದ್ದು, ಪ್ರಸ್ತುತ ದಾವೆಯಲ್ಲಿ ಪ್ರತಿವಾದಿ 2 ಮತ್ತು 3 ಹಾಜರಾಗಿ ಪ್ರತ್ಯೇಕ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದರಿಂದ ಕಡತದಲ್ಲಿನ ಲಿಖಿತ ಹೇಳಿಕೆಯಲ್ಲಿನ ಅಂಶಗಳಿಂದಾಗಿ ಮತ್ತು ದಾವಾ ಸ್ವತ್ತು ಮೂಲತಃ ಎ. ಲಾಜರ್ ಮತ್ತು ಪ್ಲೋರಾರವರಿಗೆ ಸೇರಿದ ಸ್ವಯಾರ್ಜಿತ ಸ್ವತ್ತು ಎಂಬುದರ ಬಗ್ಗೆ ಯಾವುದೇ ವಿವಾದವಿರುವುದಿಲ್ಲ ಎಂದು ನ್ಯಾಯಾಲಯಕ್ಕೆ ಕಂಡುಬರುತ್ತದೆ. ಸದರಿ ಎ. ಲಾಜರ್ ಮತ್ತು ಪತ್ನಿ ಪ್ಲೋರಾ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ವಿಚಾರಣೆ ಅತ್ಯಗತ್ಯವಾಗಿರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲೆಗಳಾದ 2010-11 ಮತ್ತು 2021-22 ನೇ ಸಾಲಿನ ಖಾತೆ ವಾದಿಯ ಹೆಸರಿನಲ್ಲಿ ತೆರಿಗೆ ಡಿಮ್ಯಾಂಡ್ ರಿಜಿಸ್ಟರ್ ಬರುತ್ತಿರುವುದನ್ನು ಮತ್ತು ವಾದಿಯು ಸ್ವಾಧೀನದಲ್ಲಿರುವ ಬಗ್ಗೆ 1 ನೇ ಪ್ರತಿವಾದಿಯೇ ಒಪ್ಪಿಕೊಂಡಿರುವುದರಿಂದ ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನದಲ್ಲಿರುವ ಬಗ್ಗೆ ಮೇಲ್ನೋಟಕ್ಕೆ ದಾಖಲಾತಿ ಮುಖೇನ ಕಂಡುಬರುತ್ತದೆ. ಆದರೆ ವಾದಿಯು ತಾನು ದಾವಾ ಸ್ವತ್ತಿನ ಮುಂಭಾಗದಲ್ಲಿ ಕೊಠಡಿ ನಿರ್ಮಿಸಲು ಪ್ರಯತ್ನಿಸುತ್ತಿರುವಾಗ್ಗೆ ಪ್ರತಿವಾದಿಗಳು ತೊಂದರೆ ನೀಡುತ್ತಿರುತ್ತಾರೆ. ಅದರಂತೆ ತಾತ್ಕಾಲಿಕ ತಡೆಯಾಜ್ಞೆ ಮಂಜೂರು ಮಾಡಬೇಕೆಂದು

ಕೋರಿರುವುದರಿಂದ ಈ ಹಂತದಲ್ಲಿ ವಾದಿಗೆ ತಾತ್ಕಾಲಿಕ ತಡೆಯಾಜ್ಞೆ ಮಂಜೂರು ಮಾಡಿದಲ್ಲಿ ವಾದಿಯು ಕೊಠಡಿ ನಿರ್ಮಿಸುವ ಸಾಧ್ಯತೆಗಳಿರುವುದರಿಂದ ದಾವಾ ಸ್ವತ್ತಿನ ಮೇಲಿನ ಹಕ್ಕು ಮತ್ತು ಸ್ವಾಧೀನತೆಯ ಬಗ್ಗೆ ವಿಚಾರಣೆ ಅತ್ಯಗತ್ಯವಾಗಿರುವುದರಿಂದ ಕೇವಲ ವಾದಿಯ ಸ್ವಾಧೀನವನ್ನು ಆಧರಿಸಿ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಮಂಜೂರು ಮಾಡುವುದು ಸೂಕ್ತವಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟು **ಅಂಶ–1 ರಿಂದ ಅಂಶ–3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

10. **ಅಂಶಃ 4–** ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

**ಆದೇಶ**

*ಅರ್ಜಿದಾರ/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ–1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಗಿದೆ.*

ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **21 ನೇ ಏಪ್ರಿಲ್** 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.

**(ಪ್ರತ್ಯೇಕ ಆದೇಶವನ್ನು ಮುಕ್ತ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು)**

**ಆದೇಶ**

*ಅರ್ಜಿದಾರ/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯನ್ನು ವಜಾಕರಿಸಲಾಗಿದೆ.*

*ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.*

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **06 ನೇ ಮಾರ್ಚ್** 2023 ರಂದು ಉಚ್ಚರಿಸಲಾಯಿತು)

**(ಶ್ರೀಮತಿ. ನಂದಿನಿ.ಎಂ.ಎನ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ. ದ. ನ್ಯಾ.ದಂ., ಕೊಳ್ಳೇಗಾಲ.